ಮೂಲ ದಾವೆ ನಂ. 108/2021

ಪಿ.ಡಬ್ಲ್ಯೂ.2

ದಿನಾಂಕಃ 12.09.2022
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.
ಮುಖ್ಯ ವಿಚಾರಣೆ ವಾದಿಯರ ಪರವಾಗಿ ಅವರ ವಕೀಲರಿಂದ ಃ

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ.

2. ವಾದಿ ಮತ್ತು ಪ್ರತಿವಾದಿಯರ ಮದ್ಯ ಪ್ರತಿವಾದಿಯ ಹೊಲಕ್ಕೆ ಸಂಬಂಧಿಸಿದಂತೆ 3-4 ವರ್ಷಗಳ ಹಿಂದೆ ಒಂದು ಮುದ್ದತ ರಜೀಸ್ಟರ ಮಾಡಿರುತ್ತಾರೆ. ಆ ಹೊಲಕ್ಕೆ 7 ಲಕ್ಷ ರೂಪಾಯಿ ವ್ಯವಹಾರ ಆಗಿರುತ್ತದೆ. ನಾನು ಒಂದು ದಾಖಲೆಗೆ ಹೆಬ್ಬಟ್ಟಿನ ಗುರುತಿನ ಸಹಿ ಹಾಕಿರುತ್ತೇನೆ. ಅದಕ್ಕೆ ನಾನುಮತ್ತು ನಿಂಗಪ್ಪ ಸಹಿ ಹಾಕಿರುತ್ತೇವೆ. ಹೊಲ ಕೊಟ್ಟವರು ಮತ್ತು ತೆಗೆದುಕೊಂಡವರು ಸಹ ಸಹಿ ಹಾಕಿರುತ್ತಾರೆ. ನಾನು ನನ್ನ ಮತ್ತು ಉಳಿದವರ ಸಹಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನಿ.ಪಿ.1 ರ ಮೇಲಿನ ರಂಗಣ್ಣನ ಸಹಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ.1(ಇ) ಎಂದು ಗುರುತಿಸಲಾಗಿದೆ. ಅದೇ ರೀತಿ ನಿಂಗಪ್ಪ ಮತ್ತು ಮಲ್ಲಿಕಾರ್ಜುನ ಇವರ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ- ಪ್ರತಿವಾದಿ ಹಾಗೂ ಪ್ರತಿವಾದಿ ಪರ ವಕೀಲರು ಗೈರುಹಾಜರಾಗಿದ್ದು ಮೇಲಾಗಿ ಪ್ರತಿವಾದ ಪತ್ರ ಸಲ್ಲಿಸದೇ ಇರುವ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.